LEGISLATIVE BUSINESS

KARNATAKA APPROPRIATION (VOTE ON ACCOUNT) BILL 1990.

Leave to Introduce

SRI M. RAJASHEKHAR MURTHY (Minister for Finance, Statistics and Institutional Finance).— Sir, I beg to move.

'That leave be granted to introduce the Karnataka Appropriation vote on account Bill, 1990''

The question was proposed

Mr. SPEAKER.— The question is,

''That leave be granted to introduce the Karnataka Appropriation Bill, 1990''.

The motion was adopted and leave was granted

SRI M. RAJASHEKHAR MURTHY.—Sir, I beg to introduce,

''The Karnataka Appropriation Bill,1990''

MR. SPEAKER.— Bill introduced. *

The Karnataka Appropriation (vote on Account) Bill, 1990.

Motion to Consider

SRI M. RAJASHEKHAR MURTHY (Minister for Finance, Statistics and Institutional Finance).— Sir, I beg to move.

''That the Karnataka Appropriation (Vote on Account) Bill, 1990 be taken into Consideration.''

The question was proposed

Clause by Clause Consideration

ಅಧ್ಯಕ್ಷರು.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

೨ ಮತ್ತು ೩ನೇ ಖಂಡಗಳು

ಅಧ್ಯಕ್ಷರು.—೨ ಮತ್ತು ೩ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯು ಪುರಸ್ಕರಿಸುವ ವಿಷಯ. ಪ್ರಸ್ತಾವ ಹೀಗಿದೆ.

''೨ ಮತ್ತು ೩ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ೨ ಮತ್ತು ೩ನೇ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

---

* Annexure.

ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ : "ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರಬೇಕು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು

ವಿಧೇಯಕದ ಅಂಗವಾದವು

ಅಧ್ಯಕ್ಷರು.—ಮಾನ್ಯ ಸಚಿವರು ಈಗ ವಿಧೇಯಕವನ್ನು ಮಂಡಿಸಬೇಕು.

ಅಂಗೀಕಾರ ಪ್ರಸ್ತಾವನೆ

ಶ್ರೀ ಎಂ. ರಾಜಶೇಖರ ಮೂರ್ತಿ.—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ಧನವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೯೦ನೇ ಇಸವಿಯ ಕರ್ನಾಟಕ ರಾಜ್ಯದ ಧನವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಮಾನ್ಯ ಸಚಿವರು ವಿಧೇಯಕಗಳನ್ನು ಮಂಡಿಸಬಹುದು.

(2) .....

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ವಿಧೇಯಕಗಳನ್ನು ಮಂಡಿಸಲು ಇಚ್ಛಿಪಡುತ್ತೇನೆ.

೧ ೧೯೯೦ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯಪಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೨ ೧೯೯೦ನೇ ಇಸವಿಯ ಕರ್ನಾಟಕ ಕೃಷಿ ವರಮಾನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೩ ೧೯೯೦ನೇ ಇಸವಿಯ ಕರ್ನಾಟಕ ಪುನರಂಜನಾ (ತಿದ್ದುಪಡಿ) ತೆರಿಗೆ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

೪ ೧೯೯೦ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಎಲ್ಲಾ ಒಟ್ಟಿಗೆ ಮಂಡಿಸುತ್ತಿದ್ದಾರೆ. ಒಂದೊಂದಾಗಿ ಮಂಡಿಸಬೇಕು.

ಅಧ್ಯಕ್ಷರು.—ಒಂದೊಂದಾಗಿ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಇದು ಬರೀ ಇಂಟ್ರೊಡಕ್ಷನ್ನಾ ?

ಅಧ್ಯಕ್ಷರು.—ಹೌದು. ಅದಕ್ಕೇ ಇಷ್ಟು ಎಲಾಬರೇಟಾಗಿದೆ.

SRI M. RAJASHEKARA MURTHY.—The rule does not come in the way to put all the Bills.

೧೯೯೦ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ.